ಡಾ.ಎಸ್.ನಂಜುಡಯ್ಯ ಗೆ ಬುಕ್ ಆಫ್ ರೆಕಾರ್ಡ್ಸ್ ಪ್ರಶಸ್ತಿ

ಯಳಂದೂರು: ತಾಲೂಕಿನ ಶಿವಕಳ್ಳಿ ಗ್ರಾಮದ ನಿವಾಸಿ ಪ್ರಸ್ತುತ ಹನೂರು ಪಟ್ಟಣದ ಜಿ.ವಿ. ಗೌಡ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಗಣಿತಶಾಸ್ತ್ರದ ಉಪನ್ಯಾಸಕ ಡಾ. ಎಸ್. ನಂಜುಂಡಯ್ಯ ರವರಿಗೆ ಶಿಕ್ಷಣ, ಸಮಾಜ ಸೇವೆ, ಸಾಂಸ್ಕೃತಿಕ ಹಾಗೂ ಬುದ್ಧನ ತತ್ವ ಸಿದ್ಧಾಂತಗಳ ಬಗ್ಗೆ ಪ್ರಚುರ ಪಡಿಸುತ್ತಿರುವು ದರಿಂದ ಯೂರೋಪಿಯನ್ ಬುಕ್ ಆಫ್ ಗ್ಲೋಬಲ್ ರೆಕಾರ್ಡ್ಸ್ ಪ್ರಶಸ್ತಿಯೂ ಸೇರಿದಂತೆ ಐದು ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

ಸೆ.19 ರಂದು ತಮಿಳುನಾಡಿನ ಪಾಂಡಿಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ವರ್ಡಿ ವೆಲ್‌ನೆಸ್ ಫೌಂಡೇಷನ್ ಟ್ರಸ್ಟ್ ವತಿಯಿಂದ ಪ್ರಶಸ್ತಿ ಪತ್ರ, ಓರಿಯಂಟಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್, ಗ್ಲೋಬಲ್ ಮೆರಿಟ್ ರೆಕಾರ್ಡ್ಸ್ ಪ್ರಶಸ್ತಿಗಳೂ ಕೂಡ ಲಭಿಸಿದವು.

ವೃತ್ತಿಯಲ್ಲಿ ಉಪನ್ಯಾಸಕರಾಗಿದ್ದರೂ ಸಹ ಇವರು ಶಿಕ್ಷಣ, ಕ್ರೀಡೆ, ಕಲೆ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಮೆರಿಕನ್ ಯೂನಿವರ್ಸಿಟಿ ಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿರುವ ಇವರು ಶಿಕ್ಷಣ, ಸಾಹಿತ್ಯ, ಕಲಾ, ಸಾಮಾಜಿಕ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಬುದ್ಧರ ಬಗ್ಗೆ ಅಪಾರ ಜ್ಞಾನ ಪಡೆದುಕೊಂಡಿರುವ ಇವರು, ಕ್ರೀಡಾ ಮಾರ್ಗದರ್ಶಕರಾಗಿ ಕೆಎಎಸ್, ಸಿಇಟಿ, ನವೋದಯ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇವರು ಉಚಿತವಾಗಿ ಮಾರ್ಗದರ್ಶಕ ಶಿಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕ್ರೀಡಾ ಮಾರ್ಗದರ್ಶಕರಾಗಿ, ಶ್ರೀ ಸಿದ್ಧಪ್ಪಾಜಿ ಪವಾಡಗಳು ಮತ್ತು ಶ್ರೀ ಮಹದೇಶ್ವರ ಮಹಿಮೆ ಎಂಬ ಕಿರುಚಿತ್ರಗಳಲ್ಲೂ ನಟಿಸಿದ್ದಾರೆ. ಇವರಿಗೆ ಅಂತರರಾಷ್ಟ್ರೀಯ ಸೇವಾ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತ, ರಾಜ್ಯ ಮಟ್ಟದ ಸೇವಾ ರತ್ನ ಪ್ರಶಸ್ತಿ, ಕರುನಾಡ ಸೇವಾ ಪ್ರಶಸ್ತಿ, ಭೀಮ ಲೋಕ ಪ್ರಶಸ್ತಿ, ಕರೋಕೆ ಪ್ರಶಸ್ತಿ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಈಗ ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿ ಲಭಿಸಿರುವುದು ನನಗೆ ಅತೀವ ಸಂತಸ ತಂದಿದ್ದು ನನ್ನ ಸೇವೆಯನ್ನು ಇನ್ನಷ್ಟು ಉತ್ತಮ ಪಡಿಸಿಕೊಳ್ಳಲು ಯತ್ನಿಸುತ್ತೇನೆ ಎಂದು ಇವರು ಹೇಳಿದರು.

ಈ ಸಂದರ್ಭದಲ್ಲಿ ಡಾ. ಜೆ. ಹರ್ಡಿಸೋಸ್, ಗುಣಶೇಖರನ್, ಶ್ರೀ ಶಿವರಾಜಾಆಚಾರ್, ಡಾ. ರಾಮಲಕ್ಷಿ ಚೆಪ್ಪಲ್ಲ, ಡಾ.ಡಿ. ರಾಮಯ್ಯ, ಡಾ. ಅರುಣ್ ಚಿನ್ನದೊರೈ ಸೇರಿದಂತೆ ಹಲವರು ಇದ್ದರು.

ಸಹಕಾರ ಸಂಘಗಳ ಸಾಲ ಸದುಪಯೋಗ ಪಡಿಸಿಕೊಳ್ಳಿ: ಟಿ.ಎಲ್ ಕೆಂಪೇಗೌಡ

ಯಶವಂತಪುರ: ಸಹಕಾರಿ ಸಂಸ್ಥೆಗಳು ತಳಮಟ್ಟದ ಆರ್ಥಿಕ ಆಧಾರ ಸ್ತಂಭಗಳಾಗಿವೆ. ರೈತರು ವ್ಯವಸಾಯ ಹಾಗೂ ಉಪಕಸುಬುಗಳಿಗೆ ಸಂಘಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ಟಿ.ಎಲ್ ಕೆಂಪೇಗೌಡ ಮನವಿ ಮಾಡಿದ್ದಾರೆ.

ಕ್ಷೇತ್ರದ ತಾವರೆಕೆರೆ ಕೃಷಿ ಪತ್ತಿನ ಸಹಕಾರ ಸಂಘದ ಮಹಾ ವಾರ್ಷಿಕ ಸಭೆ ಉದ್ಘಾಟಿಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಕಾಲದಲ್ಲಿ ಸಾಲ ಮರುಪಾವತಿಸಿದವರಿಗೆ ಸನ್ಮಾನಿಸಿ ಮಾತನಾಡಿದರು.

ರೈತರು ದೇಶದ ಬೆನ್ನೆಲುಬು. ಕೃಷಿಯೇ ದೇಶದ ಜೀವಾಳ. ಈ ನಿಟ್ಟಿನಲ್ಲಿ ಸರ್ಕಾರ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿ ದರ ಹಾಗೂ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುತ್ತಿದೆ. ಸಕಾಲದಲ್ಲಿ ಬಿತ್ತನೆ ಬೀಜ, ರಸ ಗೊಬ್ಬರ ಕೀಟನಾಶಕಗಳನ್ನು ನ್ಯಾಯಯುತ ಬೆಲೆಗೆ ಒದಗಿಸುತ್ತಿದೆ. ಉಪಕಸುಬು ಪಶು ಸಂಗೋಪನೆ, ಮೇಕೆ ಕುರಿ, ಕೋಳಿ ಸಾಕಾಣಿಕೆಗೂ ಸಾಲ, ಸಹಾಯಧನ ಒದಗಿಸುತ್ತಿದ್ದು ರೈತರು ಇದರ ಸದುಪಯೋಗ ಪಡೆದುಕೊಂಡು ಆದಾಯ ಹೆಚ್ಚಿಸಿಕೊಳ್ಳಿ ಎಂದರು.

ತಾವರೆಕೆರೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಆರ್ ಬೆಂಗಳೂರಯ್ಯ ಮಾತನಾಡಿ ಸಂಘದಲ್ಲಿ 2752 ಸದಸ್ಯರಿದ್ದಾರೆ. ಪ್ರಸಕ್ತ ಸಾಲಿನಲ್ಲಿ 12 ಕೋಟಿ ರೂಪಾಯಿ ವಹಿವಾಟು ನಡೆಸಲಾಗಿದ್ದು ಸುಮಾರು 25 ಲಕ್ಷ ಲಾಭಗಳಿಸಲಾಗಿದೆ. ಒಟ್ಟು 9 ಕೋಟಿ ರೂಪಾಯಿ ಸಾಲ ನೀಡಲಾಗಿದ್ದು ಶೇ.95ರಷ್ಟು ಮರುಪಾವತಿಯಾಗಿದೆ ಎಂದರು

ಮೂರು ಲಕ್ಷದವರೆಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಬೆಳೆ ಸಾಲ ಹಾಗೂ ಸ್ವಸಹಾಯ ಗುಂಪುಗಳಿಗೆ 5 ಲಕ್ಷದವರೆಗೆ

ತಾವರೆಕೆರೆ ವಿಎಸ್‌ಎಸ್‌ಎನ್ ಸುಸಜ್ಜಿತ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ ಲಕ್ಷಾಂತರ ರೂಪಾಯಿ ಬಾಡಿಗೆ ಗಳಿಸುತ್ತಿದೆ. ರೈತರ ವಿಶ್ವಾಸಾರ್ಹತೆ ಗಳಿಸಿರುವ ಸಹಕಾರ ಸಂಸ್ಥೆ ಲಾಭದಲ್ಲಿದೆ. ಸದಸ್ಯರು 3.35 ಕೋಟಿ ರೂಪಾಯಿಯನ್ನು ನಿಶ್ಚಿತ ಠೇವಣಿಯಾಗಿ ಇಟ್ಟಿದ್ದಾರೆ. 3.10 ಕೋಟಿ ಚಿನ್ನಾಭರಣ ಅಡಮಾನ ಸಾಲ ನೀಡಲಾಗಿದೆ ರಾಷ್ಟ್ರೀಕೃತ ಬ್ಯಾಂಕುಗಳಂತೆ, ಸಂಘದಲ್ಲೂ ಎಲ್ಲಾ ಸೌಲಭ್ಯಗಳಿವೆ. ರೈತರು ಹೆಚ್ಚಿನ ವಹಿವಾಟು ನಡೆಸಿ ಸಂಘವನ್ನು ಇನ್ನಷ್ಟು ಬಲಪಡಿಸಿ.

ಟಿ.ಎಲ್ ಕೆಂಪೇಗೌಡ,
ನಿರ್ದೇಶಕರು,
ಬಿಡಿಸಿಸಿ ಬ್ಯಾಂಕ್

ಶೂನ್ಯ ಬಡ್ಡಿ ದರದಲ್ಲಿ ಸಂಘ ಸಾಲ ನೀಡುತ್ತಿದೆ. ಜತೆಗೆ 15 ಲಕ್ಷದವರೆಗೂ ಶೇ12 ಬಡ್ಡಿ ದರದಲ್ಲಿ ವಿವಿಧ ಸಾಲ ವಿತರಿಸಲಾಗುತ್ತಿದೆ. ಸಾಮಾನ್ಯ ನಾಗರಿಕರಿಗೆ ಶೇ8 ಹಾಗೂ ಹಿರಿಯ ನಾಗರಿಕರಿಗೆ ಶೇ8.5 ಪ್ರಮಾಣದಲ್ಲಿ ನಿಶ್ಚಿತ ಠೇವಣಿಗೆ ಬಡ್ಡಿ ನೀಡಲಾಗುತ್ತಿದ್ದು ಸದಸ್ಯರು ಸದುಪಯೋಗಪಡಿಸಿಕೊಳ್ಳಿ ಎಂದರು.

ಬೆಂಗಳೂರು ದಕ್ಷಿಣ ತಾಪಂ ಮಾಜಿ ಅಧ್ಯಕ್ಷರಾದ ಟಿ.ಎಲ್ ಚಂದ್ರಶೇಖರ್, ಡಿ.ವಿ ರಾಮಚಂದ್ರಗೌಡ, ತಾವರೆಕೆರೆ ವಿಎಸ್‌ಎಸ್‌ಎನ್ ಸಿಇಒ ಮಂಜುನಾಥ್ ಟಿ.ಕೆ, ಉಪಾಧ್ಯಕ್ಷೆ ಪಿ.ಕುಮಾರಿ ಸಂಘದ ನಿರ್ದೇಶಕರಾದ , ಟಿ.ವಿ ಸಿದ್ದರಾಜು, ಟಿ.ವಿ ಆನಂದ್, ಡಿ.ವಿ ಮುನಿರಾಜು, ಸಿ.ಹನುಮಂತಯ್ಯ, ರತ್ನಮ್ಮ, ಭಾಗ್ಯಮ್ಮ, ಪುಟ್ಟಲಕ್ಷಮ್ಮ, ಮೀನಾಕ್ಷಿ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಮಯ್ಯ, ರುಚಿಕರ ನಿರ್ದೇಶಕರಾದ ದೇವರಾಜ್ ಎಂ, ಅಹಮ್ಮದ್ ಖಾನ್ ಹಾಗೂ ಸದಸ್ಯರು ಇದ್ದರು.

ಪ್ರತಿಮೆ ಮರುಸ್ಥಾಪಿಸದಿದ್ದರೆ ಪಾದಯಾತ್ರೆ: ಸಿದ್ದರಾಮಯ್ಯ ಅಭಿಮಾನಿಗಳ ಎಚ್ಚರಿಕೆ

ತಾಂಡವಪುರ: ಕಲ್ಬುರ್ಗಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪ್ರತಿಮೆಯನ್ನು ಅಲ್ಲಿನ ಸಿದ್ದು ಅಭಿಮಾನಿಗಳು ಅವರ ಕಂಚಿನ ಪ್ರತಿಮೆಯನ್ನು ನಿರ್ಮಾಣ ಮಾಡುವ ಮೂಲಕ ತಮ್ಮ ಅಭಿಮಾನವನ್ನು ತೋರಿಸಿದರು ಅಲ್ಲಿನ ಜಿಲ್ಲಾಡಳಿತ ರಾತ್ರಿ ನಿರ್ಮಿಸಿದ್ದ ಸಿದ್ದರಾಮಯ್ಯನವರ ಪ್ರತಿಮೆಯನ್ನು ಬೆಳಿಗ್ಗೆ ಅವರ ಪ್ರತಿಮೆಯನ್ನು ತಿರುವು ಗೊಳಿಸಿರುವುದನ್ನು ಖಂಡಿಸಿ ಮತ್ತೆ ಅದೇ ಜಾಗದಲ್ಲಿ ಅವರ ಪ್ರತಿಮೆಯನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ. ಮೈಸೂರು ನಂಜನಗೂಡು ಊಟಿ ರಸ್ತೆ ಹುಲ್ಲಳ್ಳಿ ಸರ್ಕಲ್ ನಲ್ಲಿ ಇಂದು ಡಾ. ಎಸ್ ಯತೀಂದ್ರ ಸಿದ್ದರಾಮಯ್ಯನವರ ಫೌಂಡೇಶನ್ ಅಧ್ಯಕ್ಷ ಕೆ ಎಸ್ ಸುಂಡಿ ರವಿಕುಮಾರ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ತಾಲೂಕು ದಂಡಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಫೌಂಡೇಶನ್ ಅಧ್ಯಕ್ಷ ರವಿಕುಮಾರ್ ನಂಜನಗೂಡು ತಾಲೂಕು ಲಾರಿ ಮಾಲೀಕರ ಸಂಘದ ಅಧ್ಯಕ್ಷ ವಿಶ್ವನಾಥ್ ಕುರುವ ಸಮಾಜದ ಮುಖಂಡರಾದ ಕುರಿಹುಂಡಿ ರಾಜು ರವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅವರ ಅಧಿಕಾರದ ಅವಧಿಯಲ್ಲಿ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತರುವ ಮೂಲಕ ರಾಜ್ಯದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿದಂತ ಹಿಂದುಳಿದ ವರ್ಗದ ಮಹಾನ್ ನಾಯಕ ಅವರ ಪ್ರತಿಮೆಯನ್ನು ಕಲ್ಬುರ್ಗಿ ಕೋರ್ಟ್ ಸರ್ಕಲ್ ನಲ್ಲಿ ಹಾಲಿನ ಸಿದ್ದರಾಮಯ್ಯನವರ ಅಭಿಮಾನಿಗಳು ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಿದರು ಸ್ಥಾಪನೆ ಮಾಡಿದ ಒಂದೇ ದಿನದಲ್ಲಿ ಅವರ ಪ್ರತಿಮೆಯನ್ನು ಅಲ್ಲಿನ ಜಿಲ್ಲಾಡಳಿತ ತೆರವು ಗೊಳಿಸಿ ಇಡೀ ಹಿಂದುಳಿದ ವರ್ಗದ ಸಮಾಜದವರನ್ನು ಅಪಮಾನ ಮಾಡಿದ್ದಾರೆ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿ ಮತ್ತೆ ಸಿದ್ದರಾಮಯ್ಯನವರ ಕಂಚಿನ ಪ್ರತಿಮೆಯನ್ನು ಅದೇ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡ್ತಿದ್ದಲ್ಲಿ ನಾವು ರಾಜ್ಯದಂತ ಉಗ್ರವಾದ ಹೋರಾಟವನ್ನ ಹಮ್ಮಿಕೊಳ್ಳಬೇಕಾಗುತ್ತದೆ ನಾವು ಇವತ್ತು ತಾತ್ಕಾಲಿಕವಾಗಿ ಸಾಂಕೇತಿಕ ಪ್ರತಿಭಟನೆಯನ್ನು ಮಾಡಿದ್ದೇವೆ ಹಾಗೂ ಒಂದು ವೇಳೆ ಪ್ರತಿಮೆಯನ್ನು ಹಾಕದಿದ್ದಲ್ಲಿ ನಾವು ನಂಜನಗೂಡಿನಿಂದ ಕಲಬುರ್ಗಿ ವರೆಗೂ ಪಾದಯಾತ್ರೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮುಖಂಡರುಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಈ ಪ್ರತಿಭಟನೆಯಲ್ಲಿ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರ ಫೌಂಡೇಶನ್ ಅಧ್ಯಕ್ಷ ಕೆ ಎಸ್ ಹುಂಡಿ ಕೆ ಆರ್ , ರವಿಕುಮಾರ್ ಮುಖಂಡರುಗಳಾದ ಕಳಲೆ ಕನಕರಾಜ್ , ಚಾಮಲಾಪುರದ ಹುಂಡಿ, ರಾಮು ತಾಲೂಕು ಲಾರಿ ಮಾಲೀಕರ ಸಂಘದ ಅಧ್ಯಕ್ಷ ವಿಶ್ವನಾಥ್ ಕೀರ್ತಿರಾಜ್ ವಿಶ್ವಾ , ನಗರಸಭಾ ಸದಸ್ಯ ಗಂಗಾಧರ್ ಕುರಿಹುಂಡಿ ರಾಜು ತಾಂಡವಪುರ ಎಂ , ದಕ್ಷಿಣ ಮೂರ್ತಿ ಮಾಜಿ ಗ್ರಾಪಂ ಸದಸ್ಯ ಶಿವರಾಜು ಟಿಕೆ ರವಿ ಬಿಳಿಗೆರೆ ಗೋಲ್ಡ್ ಸುರೇಶ್, ಮಹೇಶ್, ತಾಲೂಕು ಹಾಲುಮತ ಮಹಾಸಭಾಧ್ಯಕ್ಷ ಕುಮಾರ್ ಗೌಡ , ತಗಡೂರು ಗಾರ್ಡನ್ ಮಹೇಶ್ ಶಿವಕುಮಾರ್ ಅಲಂಬೂರು ಮುಂಟಿ, ಮಹದೇವಸ್ವಾಮಿ, ಗುರುರಾಜು ಕಿರುಗುಂದ ಶಿವ ನಾಗ ಮಲ್ಲಪುರ ಪ್ರಕಾಶ್ ಲೋಕೇಶ್, ಪ್ರಕಾಶ್, ಸುನಿಲ್, ಮಂಜು, ಜೈಕುಮಾರ್, ಬಸವರಾಜ್, ಗುರು, ರವಿ, ಶಂಕರ್ ಸೇರಿದಂತೆ 50ಕ್ಕೂ ಹೆಚ್ಚು ಅಭಿಮಾನಿಗಳು ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು ಮುನ್ನೆಚ್ಚರಿಕೆ ಕ್ರಮವಾಗಿ ನಂಜನಗೂಡು ಪೊಲೀಸರು ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದರು.

RAJARATHA CYBER
All Online Services Under One Roof!
• Aadhaar, PAN Card, Voter ID, Ration Card
• e-Khata, Senior Citizen Card
& Other Government Services
• Address: Junior College Road, Nelamangala
Contact: 9886926812 for medicts

ನೀಲಿ ಶಾಲು ಹೇಳಿಕೆ ವಿವಾದ: ಪ್ರತಾಪ್ ಸಿಂಹ ವಿರುದ್ಧ ಪ್ರತಿಭಟನೆ

ಟಿ.ನರಸೀಪುರ: ನೀಲಿ ಶಾಲಿನ ಕುರಿತು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ನೀಡಿರುವ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಮಾರ್ಗ) ವತಿಯಿಂದ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು. ಪ್ರತಿಭಟನಾಕಾರರು ಪ್ರತಾಪ್ ಸಿಂಹ ಅವರ ಭಾವಚಿತ್ರ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಎಸ್. ಚಂದ್ರಶೇಖರ್ ಮಾತನಾಡಿ, ಪ್ರತಾಪ್ ಸಿಂಹ ಅವರ ಹೇಳಿಕೆ ಆಕ್ಷೇಪಾರ್ಹವಾಗಿದ್ದು, ಸಮಾಜದ ಸೌಹಾರ್ದತೆ ಹಾಗೂ ಸಂವಿಧಾನದ ಆಶಯಗಳಿಗೆ ಧಕ್ಕೆ ತರುವಂತಹ ಹೇಳಿಕೆಗಳನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಸಾರ್ವಜನಿಕ ಜೀವನದಲ್ಲಿರುವವರು ಸಾಮಾಜಿಕವಾಗಿ ಸೂಕ್ಷ್ಮವಾಗಿರುವ ವಿಚಾರಗಳ ಕುರಿತು ಮಾತನಾಡುವಾಗ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ನೀಲಿ ಶಾಲು ದಲಿತ ಸಂಘಟನೆಗಳ ಹೋರಾಟ ಮತ್ತು ಅಂಬೇಡ್ಕರ್ ಚಿಂತನೆಗೆ ಸಂಬಂಧಿಸಿದ ಪ್ರಮುಖ ಸಂಕೇತವಾಗಿದ್ದು, ಅದರ ಕುರಿತು ವ್ಯಂಗ್ಯ ಅಥವಾ ಅವಹೇಳನಕಾರಿ ರೀತಿಯಲ್ಲಿ ಮಾತನಾಡಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಆಕ್ಷೇಪ ವ್ಯಕ್ತಪಡಿಸಿದರು. ಪ್ರತಾಪ್ ಸಿಂಹ ಅವರು ಇತ್ತೀಚೆಗೆ ದಸಂಸ ಕಾರ್ಯಕರ್ತರ ಪ್ರತಿಭಟನೆ ಹಾಗೂ ನೀಲಿ ಶಾಲಿನ ಕುರಿತು ಹೇಳಿಕೆ ನೀಡಿರುವುದು ಸಾರ್ವಜನಿಕ ಚರ್ಚೆಗೆ ಕಾರಣವಾಗಿ–ತ್ತು.

ಸಮಾಜದ ವಿವಿಧ ವರ್ಗಗಳ ನಡುವೆ ಸೌಹಾರ್ದತೆ ಮತ್ತು ಶಾಂತಿ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಯಾವುದೇ ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟುಮಾಡುವಂತಹ ಹೇಳಿಕೆಗಳು ವಿವಾದಕ್ಕೆ ಕಾರಣವಾಗುವ ಸಾಧ್ಯತೆ ಇರುವುದರಿಂದ ಇಂತಹ ಹೇಳಿಕೆಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದಸಂಸ ಮುಖಂಡರು ಒತ್ತಾಯಿಸಿದರು.

ಪ್ರತಾಪ್ ಸಿಂಹ ವಿರುದ್ಧ ಈಗಾಗಲೇ ಹಲವು ಪ್ರಕರಣಗಳಿವೆ ಎಂದು ಆರೋಪಿಸಿದ ಆಲಗೂಡು ಎಸ್. ಚಂದ್ರಶೇಖರ್, ಪ್ರಕರಣಗಳ ಹಿನ್ನೆಲೆಯಲ್ಲಿ ಪೊಲೀಸರು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಕಾನೂನು ಎಲ್ಲರಿಗೂ ಒಂದೇ ಆಗಿದ್ದು, ದೂರುಗಳು ಮತ್ತು ಪ್ರಕರಣಗಳ ಕುರಿತು ಕಾನೂನು ಪ್ರಕಾರ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಾಪ್ ಸಿಂಹ ವಿರುದ್ಧ ಟಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿರುವುದಾಗಿ ಇತ್ತೀಚಿನ ವರದಿಗಳು ತಿಳಿಸಿವೆ.

ತಾಲೂಕು ಸಂಚಾಲಕ ಕುಕ್ಕೂರು ರಾಜು ಮಾತನಾಡಿ, ಪ್ರತಾಪ್ ಸಿಂಹ ಅವರ ಹೇಳಿಕೆಗಳು ಹಾಗೂ ಕೋಮು ಸಾಮರಸ್ಯಕ್ಕೆ ಭಂಗ ತರುವಂತಹ ಕೃತ್ಯಗಳನ್ನು ತೀವ್ರವಾಗಿ ಖಂಡಿಸಿದರು. ಅವರ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿವೆ ಎಂದು ಹೇಳಿದ ಅವರು, ಇಷ್ಟೆಲ್ಲ ಪ್ರಕರಣಗಳಿದ್ದರೂ ಬಂಧನವಾಗದಿರುವುದು ಏಕೆ ಎಂದು ಪ್ರಶ್ನಿಸಿದರು. ಪ್ರಕರಣಗಳ ಬಗ್ಗೆ ಪೊಲೀಸರು ನಿಷ್ಪಕ್ಷಪಾತವಾಗಿ ಪರಿಶೀಲನೆ ನಡೆಸಿ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರಮೂರ್ತಿ ಮಾತನಾಡಿ, ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ಆಶಯಗಳನ್ನು ರಕ್ಷಿಸುವ ನಿಟ್ಟಿನಲ್ಲಿ ದಲಿತ ಸಂಘಟನೆಗಳು ನಿರಂತರವಾಗಿ ಹೋರಾಟ ನಡೆಸುತ್ತಿವೆ ಎಂದು ಹೇಳಿದರು. ಸಾರ್ವಜನಿಕವಾಗಿ ನೀಡುವ ಹೇಳಿಕೆಗಳು ಸಮಾಜದ ಮೇಲೆ ಬೀರುವ ಪರಿಣಾಮವನ್ನು ಪರಿಗಣಿಸಬೇಕು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೆಂಪಯ್ಯನಹುಂಡಿ ಆರ್. ರಾಜು, ಆಲಗೂಡು ಶಿವಣ್ಣ, ಜಿಲ್ಲಾ ಸಂಚಾಲಕ ಕನ್ನನಾಯಕನಹಳ್ಳಿ ಮರಿಸ್ವಾಮಿ, ಕೆಬ್ಬೆಹುಂಡಿ ಲಿಂಗರಾಜು, ಆಲಗೂಡು ನಂದನ್, ತ್ರಿವೇಣಿ ಮಹದೇವಮ್ಮ, ಸಹ ಸಂಚಾಲಕರಾದ ಕೊಳತ